# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1015 |
| ಉತ್ತರಿಸಬೇಕಾದ ದಿನಾಂಕ | : | 15-12-2023 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಹಣಕಾಸು, ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳ ಸ್ಥಾಪನೆಗೆ ಹಾಗೂ ಕಾರ್ಯನಿರ್ವಹಣೆಯ ನಿಯಮಗಳಾವುವು; (ವಿವರ ನೀಡುವುದು) | ರಾಜ್ಯದಲ್ಲಿ ಹಣಕಾಸು ಹಾಗೂ ಲೇವಾದೇವಿ ಸಂಸ್ಥೆಗಳು ಕರ್ನಾಟಕ ಲೇವಾದೇವಿದಾರರ ಅಧಿನಿಯಮ 1961 ಹಾಗೂ ಕರ್ನಾಟಕ ಲೇವಾದೇವಿದಾರರ ನಿಯಮಗಳು 1965ರಲ್ಲಿಯ ಅವಕಾಶಗಳ ರೀತ್ಯಾ ಕಾರ್ಯನಿರ್ವಹಿಸುತ್ತವೆ.<br><br>ಗಿರವಿದಾರರ ಸಂಸ್ಥೆಗಳು ಕರ್ನಾಟಕ ಗಿರಿವಿದಾರರ ಅಧಿನಿಯಮ 1961 ಹಾಗೂ ಕರ್ನಾಟಕ ಗಿರಿವಿ-ದಲ್ಲಾಳಿಯ ನಿಯಮಗಳು 1966 ರಲ್ಲಿಯ ಅವಕಾಶಗಳ ರೀತ್ಯಾ ಕಾರ್ಯನಿರ್ವಹಿಸುತ್ತವೆ.<br><br>ಕರ್ನಾಟಕ ಲೇವಾದೇವಿ ಕಾಯ್ದೆ 1961ರ ಕಲಂ 5, 6 ಹಾಗೂ 7 ರ ಹಾಗೂ ಕರ್ನಾಟಕ ಗಿರಿವಿದಾರರ ಅಧಿನಿಯಮ 1961 ಕಲಂ 3, 4 ಹಾಗೂ 5 ಅವಕಾಶಗಳ ವಿವರಗಳನ್ನು **ಅನುಬಂಧ -1** ರಲ್ಲಿ ನೀಡಲಾಗಿದೆ. |
| ಆ) | ಹಣಕಾಸು ಸಂಸ್ಥೆಗಳು ಸಾಲ ವಸೂಲಾತಿಗೆ ಅನುಸರಿಸುತ್ತಿರುವ ಕಾರ್ಯ ತಂತ್ರಗಳ ಕುರಿತು ಸರ್ಕಾರ ನಿಯಮಗಳನ್ನು ರೂಪಿಸಿದೆಯೇ; ಕೆಲವು ಹಣಕಾಸು ಸಂಸ್ಥೆಗಳು ಕಾನೂನು ಬಾಹಿರ ಸಾಲ ವಸೂಲಾತಿ ಕ್ರಮಗಳನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ಮಾಹಿತಿ ನೀಡುವುದು | ರಾಜ್ಯದಲ್ಲಿ ಹಣಕಾಸು ಹಾಗೂ ಲೇವಾದೇವಿದಾರ ಸಂಸ್ಥೆಗಳು ಕರ್ನಾಟಕ ಲೇವಾದೇವಿದಾರರ ಕಾಯ್ದೆ 1961 ಕಲಂ 24 ರೀತ್ಯಾ ಸಾಲ ವಸೂಲಾತಿಗೆ ಕ್ರಮವಿಡಬಹುದಾಗಿದೆ.<br><br>ರಾಜ್ಯದಲ್ಲಿ ಹಣಕಾಸು ಹಾಗೂ ಲೇವಾದೇವಿ ಸಂಸ್ಥೆಗಳಿಗೆ ಕರ್ನಾಟಕ ಲೇವಾದೇವಿ ಕಾಯ್ದೆ 1961 ಕಲಂ 28 ರನ್ವಯ ಹಾಗೂ ಕಾಲಕಾಲಕ್ಕೆ ಹೊರಡಿಸಿದ ಸರ್ಕಾರದ ಅಧಿಸೂಚನೆ ಮೂಲಕ ಭದ್ರುತಾ ಸಹಿತ ಸಾಲಕ್ಕೆ ಶೇ 14%. ಹಾಗೂ ಭದ್ರುತಾ ರಹಿತ ಸಾಲಕ್ಕೆ ಶೇ 16% ಬಡ್ಡಿದರ ಮಿತಿಗೊಳಿಸಲಾಗಿದೆ.<br><br>ಕಾನೂನು ಬಾಹಿರ ಸಾಲ ವಸೂಲಾತಿ ಕ್ರಮ ಅನುಸರಿಸುತ್ತಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ. |

| | | |
|---|---|---|
| ಇ) | ರಾಜ್ಯದಲ್ಲಿರುವ ಹಣಕಾಸು ಹಾಗೂ ಗಿರವಿ ಸಂಸ್ಥೆಗಳೆಷ್ಟು: (ವರ್ಗವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ದಿನಾಂಕ.31-03-2023ರ ಅಂತ್ಯಕ್ಕೆ ಇದ್ದಂತೆ **24461** ಹಣಕಾಸು ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳಿರುತ್ತವೆ.<br><br>ವರ್ಗವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಈ) | ಮುಚ್ಚಿರುವ ಹಣಕಾಸು, ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳೆಷ್ಟು: ಪರವಾನಿಗೆ ರದ್ದುಗೊಳಿಸಿದ ಸಂಸ್ಥೆಗಳೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ದಿನಾಂಕ.31-03-2023ರ ಅಂತ್ಯಕ್ಕೆ ಇದ್ದಂತೆ **5387** ಹಣಕಾಸು, ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳು ತಮ್ಮ ಪರವಾನಗಿಯನ್ನು ನವೀಕರಿಸಿಕೊಂಡಿರುವುದಿಲ್ಲ.<br><br>ಕಳೆದ ಐದು ವರ್ಷಗಳಲ್ಲಿ **1136** ಹಣಕಾಸು, ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳ ಪರವಾನಗಿಯನ್ನು ರದ್ದುಗೊಳಿಸಲಾಗಿದೆ.<br><br>ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |
| ಉ) | ಇಲ್ಲಿಯವರೆಗೆ ಇವುಗಳು ಪಾವತಿಸಿದ ಭದ್ರತಾ ಠೇವಣಿ ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ದಿನಾಂಕ. 31-3-2023ರ ಅಂತ್ಯಕ್ಕೆ ಇದ್ದಂತೆ ಹಣಕಾಸು, ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳಿಂದ ಒಟ್ಟಾರೆ ರೂ.**2521.60** ಲಕ್ಷ ಮೊತ್ತದ ಭದ್ರತಾ ಠೇವಣಿ ಪಾವತಿಯಾಗಿರುತ್ತದೆ.<br><br>ಜಿಲ್ಲಾವಾರು ವಿವರಗಳನ್ನು **ಅನುಬಂಧ-4** ರಲ್ಲಿ ನೀಡಲಾಗಿದೆ. |
| ಊ) | ಆರ್ಥಿಕ ಇಲಾಖೆಯಿಂದ ಈವರೆಗೆ ಸರ್ಕಾರಕ್ಕೆ ಈ ಸಂಸ್ಥೆಗಳು ಜಮೆ ಮಾಡಿದ ಭದ್ರತಾ ಠೇವಣಿ, ಸದರಿ ಸಂಸ್ಥೆಗಳಿಗೆ ಮರು ಪಾವತಿಸಲು ಕೆ2 ತಂತ್ರಾಂಶದಲ್ಲಿ ಮ್ಯಾಪಿಂಗ್ ಮಾಡಲಾಗಿದೆಯೇ: ಮ್ಯಾಪಿಂಗ್ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ: ಉಪ ಖಜಾನೆಯಲ್ಲಿ ಬಾಕಿಯಿರುವ/ಹಿಂದುರುಗಿಸಿದ ಬಿಲ್ಲುಗಳೆಷ್ಟು? (ಜಿಲ್ಲಾವಾರು ವಿವರ ನೀಡುವುದು) | ಹಣಕಾಸು, ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳ ಭದ್ರತಾ ಠೇವಣಿಯನ್ನು ಮರು ಪಾವತಿಸಲು ಕೆ2 ತಂತ್ರಾಂಶದಲ್ಲಿ ಮ್ಯಾಪಿಂಗ್ ಮಾಡಲಾಗಿದೆ.<br><br>ಉಪ ಖಜಾನೆಯಲ್ಲಿ ಬಾಕಿಯಿರುವ ಹಿಂದಿರುಗಿಸಿದ ಬಿಲ್ಲುಗಳ ಮಾಹಿತಿಯನ್ನು **ಅನುಬಂಧ-5** ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಸಿಒ 152 ಸಿಎಲ್ಎಮ್ 2023**

(ಕೆ.ಎನ್.ರಾಜಣ್ಣ)
**ಸಹಕಾರ ಸಚಿವರು**

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ : 1015 ಕ್ಕೆ ಅನುಬಂಧ "1"

## 1.ಹಣಕಾಸು, ಲೇವಾದೇವಿದಾರ ಸಂಸ್ಥೆಗಳ ಸ್ಥಾಪನೆಗೆ ಹಾಗೂ ಕಾರ್ಯನಿರ್ವಹಣೆಯ ಕುರಿತ ಕರ್ನಾಟಕ ಲೇವಾದೇವಿ ಕಾಯ್ದೆ 1961ರಲ್ಲಿನ ಅವಕಾಶಗಳು

**ಕಲಂ 05 :-** ಲೇವಾದೇವಿದಾರರು ಲೈಸನ್ಸ್ ಪಡೆಯುವುದು : (Money-lenders to obtain License) :- ಯಾರೇ ವ್ಯಕ್ತಿಯು, ಲೈಸೆನ್ಸಿನ ನಿಬಂಧನೆ ಮತ್ತು ಷರತ್ತುಗಳ (ಅಡಿಯಲ್ಲಿ ಮತ್ತು ಅವುಗಳಿಗೆ ಅನುಸಾರವಾಗಿಯಲ್ಲದೆ (ಮತ್ತು 7-ಎ ಪ್ರಕರಣದಲ್ಲಿಉಪಬಂಧಿಸಲಾದಂತೆ ಭದ್ರತಾ ಠೇವಣಿಯನ್ನು ಸಂದಾಯ ಮಾಡಿದ ಮೇಲಲ್ಲದೇ, ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ಅಧಿನಿಯಮ, 1985 ರ ಪ್ರಾರಂಭದತರುವಾಯ) ರಾಜ್ಯದಲ್ಲಿ ಲೇವಾದೇವಿ ವ್ಯವಹಾರವನ್ನು ನಡೆಸತಕ್ಕದ್ದಲ್ಲ.

**ಕಲಂ 6. ಲೈಸೆನ್ಸಿಗಾಗಿ ಅರ್ಜಿ(Application for Licence) -(1)** ಪ್ರತಿಯೊಬ್ಬ ಲೇವಾದೇವಿದಾರನು, ತಾನು ಲೇವಾದೇವಿ ವ್ಯವಹಾರವನ್ನು ನಡೆಸಲು ಉದ್ದೇಶಿಸುವ ಸ್ಥಳದ ಪರಿಮಿತಿಗಳೊಳಗಿನ ಪ್ರದೇಶದ ಅಥವಾ ಆ ಪ್ರದೇಶದಲ್ಲಿಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಅಂಥ ವ್ಯವಹಾರವನ್ನು ನಡೆಸಲು ಉದ್ದೇಶಿಸಿದರೆ, ಅಂಥ ವ್ಯವಹಾರದ ಪ್ರಧಾನ ಸ್ಥಳವು ಇರುವ ಪ್ರದೇಶದ ಸಹಾಯಕ ರಿಜಿಸ್ಟ್ರಾರನಿಗೆ ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮುಂಚೆ ಒಂದು ಲೈಸೆನ್ಸಿನ ಮಂಜೂರಾತಿಗಾಗಿ ನಿಯಮಿಸಲಾದ ನಮೂನೆಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸತಕ್ಕದ್ದು. ಅಂಥ ಅರ್ಜಿಯು ಈ ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:

(ಎ)ಅಂಥ ಲೇವಾದೇವಿದಾರನು ವ್ಯವಹಾರವನ್ನು ನಡೆಸಲು ಉದ್ದೇಶಿಸಿರುವ ಹೆಸರು ಮತ್ತು ವ್ಯವಹಾರ ನಿರ್ವಹಣೆಗೆ ಜವಾಬ್ದಾರನಾಗಿರಲು ಉದ್ದೇಶಿತ ವ್ಯಕ್ತಿಯ ಹೆಸರು;

(ಬಿ) ಅರ್ಜಿಯು:-

(i) ಒಬ್ಬ ವ್ಯಕ್ತಿಯಿಂದ ಅಥವಾ ವ್ಯಕ್ತಿಯ ಪರವಾಗಿ ಆಗಿದ್ದರೆ, ಅಂಥ ವ್ಯಕ್ತಿಯ ಹೆಸರು ಮತ್ತು ವಿಳಾಸ:

(ii)ಅವಿಭಕ್ತ ಹಿಂದೂ ಕುಟುಂಬದಿಂದ ಅಥವಾ ಅದರ ಪರವಾಗಿ ಆಗಿದ್ದರೆ, ಅಂಥ ಕುಟುಂಬದ ವ್ಯವಸ್ಥಾಪಕ ಅಥವಾ ಕರಣವಾನ ಅಥವಾ ಯಜಮಾನ ಮತ್ತು ವಯಸ್ಕದಾಯಾದಿಗಳ ಹೆಸರುಗಳು ಮತ್ತು ವಿಳಾಸಗಳು;

(iii)ಒಂದು ಕಂಪನಿಯ ಪರವಾಗಿದ್ದರೆ, ನಿರ್ದೇಶಕರ ಮತ್ತು ಅದರ ಮ್ಯಾನೇಜರ್‌ನ ಅಥವಾ ಅದರ ಕಾರ್ಯನಿರ್ವಹಣೆ ನಡೆಸುವ ಪ್ರಧಾನ ಅಧಿಕಾರಿಯ ಹೆಸರುಗಳು ಮತ್ತುವಿಳಾಸಗಳು:

(iv)ವ್ಯಕ್ತಿಗಳ ನಿಗಮಿತವಲ್ಲದ ನಿಕಾಯದಿಂದ ಅಥವಾ ಅದರ ಪರವಾಗಿ ಆಗಿದ್ದರೆ, ಅಂಥ ವ್ಯಕ್ತಿಗಳ ಹೆಸರುಗಳು ಮತ್ತು ವಿಳಾಸಗಳು:

ಸಿ) ರಾಜ್ಯದಲ್ಲಿ ಲೇವಾದೇ ವಿವ್ಯವಹಾರದ ಪ್ರದೇಶ ಮತ್ತು ಸ್ಥಳ ಅಥವಾ ಪ್ರಧಾನಸ್ಥಳ:

(ಡಿ)ಲೇವಾದೇವಿ ವ್ಯವಹಾರವನ್ನು ನಡೆಸಲಾಗುವ ಅಥವಾ ನಡೆಸಲು ಉದ್ದೇಶಿಸಲಾದ ರಾಜ್ಯದಲ್ಲಿರುವ ಇತರ ಯಾವುದೇ ಸ್ಥಳದ ಹೆಸರು;

(ಇ)ಅರ್ಜಿಗೆ ಸಹಿ ಮಾಡಿರುವ ವ್ಯಕ್ತಿಯು ಸ್ವತಃ ತಾನೇ ಆಗಲಿ ಅಥವಾ ಸಂದರ್ಭಾನುಸಾರ ಅಂಥ ಅರ್ಜಿಯನ್ನು ಯಾರ ಪರವಾಗಿ ಮಾಡಲಾಗಿದೆಯೋ ಅಂಥ ಅವಿಭಕ್ತ ಹಿಂದೂ ಕುಟುಂಬದ ಯಾರೇ ವಯಸ್ಕದಾಯಾದಿ ಅಥವಾ ಕಂಪನಿಯ ಯಾರೇ ನಿರ್ದೇಶಕ, ಮ್ಯಾನೇಜರ್ ಅಥವಾ ಪ್ರಧಾನ ಅಧಿಕಾರಿಯ ಅಥವಾ ನಿಗಮಿತವಲ್ಲದ ನಿಕಾಯದ ಯಾರೇ ಸದಸ್ಯನು ಅರ್ಜಿಯ ದಿನಾಂಕಕ್ಕೆ ನಿಕಟಪೂರ್ವದ [ಮಾರ್ಚ ತಿಂಗಳ 31ನೇ ದಿನಾಂಕದಂದು] ಕೊನೆಗೊಳ್ಳುವ ವರ್ಷದಲ್ಲಿ ವೈಯಕ್ತಿಕವಾಗಿಯಾಗಲಿ ಅಥವಾ

ಪಾಲುದಾರಿಕೆಯಲ್ಲಾಗಲಿ ಅಥವಾ ಇತರ ಯಾರೇ ದಾಯಾದಿಯೊಂದಿಗೆ ಅಥವಾ ಇತರ ಯಾರೇ ವ್ಯಕ್ತಿಯೊಂದಿಗೆ ಸಂಯುಕ್ತವಾಗಿಯಾಗಲಿ ಮತ್ತು ಅದೇ ಅಥವಾ ಇತರ ಯಾವುದೇ ಹೆಸರಿನಲ್ಲಾಗಲಿ ರಾಜ್ಯದಲ್ಲಿ ಲೇವಾದೇವಿ ವ್ಯವಹಾರವನ್ನು ನಡೆಸಿರುವ ಬಗ್ಗೆ;

(ಎಫ್) ಅರ್ಜಿಯನ್ನು ಸಲ್ಲಿಸಲಾಗಿರುವ ವರ್ಷದಲ್ಲಿ ಅಂಥ ವ್ಯಕ್ತಿಯು ಲೇವಾದೇವಿ. ವ್ಯವಹಾರದಲ್ಲಿ ತೊಡಗಿಸಲು ಉದ್ದೇಶಿಸಿರುವ ಬಂಡವಾಳದ ಒಟ್ಟು ಮೊಬಲಗು:

(ಜಿ) ಲೇವಾದೇವಿ ವ್ಯವಹಾರವನ್ನು ನಡೆಸಲಾಗುವ ಸ್ಥಳಗಳು ಒಂದಕ್ಕಿಂತ ಹೆಚ್ಚು ಆಗಿದ್ದರೆ, ಅಂಥ ಪ್ರತಿಯೊಂದು ಸ್ಥಳದಲ್ಲಿ ವ್ಯವಹಾರ ನಿರ್ವಹಿಸತಕ್ಕ ವ್ಯಕ್ತಿಗಳ ಹೆಸರುಗಳು,

(2) ಅರ್ಜಿಯು ಲಿಖಿತದಲ್ಲಿರತಕ್ಕದ್ದು ಮತ್ತು :-

(ಎ) (i) ಅರ್ಜಿಯನ್ನು ಒಬ್ಬ ವ್ಯಕ್ತಿಯು ಸಲ್ಲಿಸಿದ್ದರೆ, ಅಂಥ ವ್ಯಕ್ತಿಯು;

(ii)ಅರ್ಜಿಯನ್ನು ಒಂದು ಅವಿಭಕ್ತ ಹಿಂದೂ ಕುಟುಂಬದ ಪರವಾಗಿ ಮಾಡಿದ್ದರೆ, ಸಂದರ್ಭಾನುಸಾರ, ಅಂಥ ಕುಟುಂಬದ ವ್ಯವಸ್ಥಾಪಕ ಅಥವಾ ಕರಣವಾನ ಅಥವಾ ಯಜಮಾನನು:

(iii)ಅರ್ಜಿಯನ್ನು ಒಂದು ಕಂಪನಿ ಅಥವಾ ನಿಗಮಿತವಲ್ಲದ ನಿಕಾಯವು ಸಲ್ಲಿಸಿದ್ದರೆ, ಕಾರ್ಯನಿರ್ವಹಣಾ ನಿರ್ದೇಶಕ ಅಥವಾ ಭಾರತದ ರಾಜ್ಯಕ್ಷೇತ್ರದಲ್ಲಿ ಅದರ ಪ್ರಧಾನ ವ್ಯವಹಾರ ಸ್ಥಳದ ಅಥವಾ ಅದು ವ್ಯವಹಾರ ನಡೆಸಲು ಉದ್ದೇಶಿಸಲಾದ ಪ್ರದೇಶದಲ್ಲಿ ಅದರ ವ್ಯವಹಾರ ಸ್ಥಳದ ನಿಯಂತ್ರಣವನ್ನು ಹೊಂದಿರುವ ಇತರ ಯಾರೇ ವ್ಯಕ್ತಿಯು ಸಹಿ ಮಾಡಿರತಕ್ಕದ್ದು;

(ಬಿ) ಒಬ್ಬ ಲೇವಾದೇವಿದಾರ ನಿಂದ ಸ್ವತಃ ಆಗಲಿ ಅಥವಾ ಸಂದರ್ಭಾನುಸಾರ ಕುಟುಂಬದ ಮೂಲಕ ಅಥವಾ ಕಂಪನಿಯ ಮೂಲಕ ಅಥವಾ ನಿಗಮಿತವಲ್ಲದ ನಿಕಾಯದ ಮೂಲಕ ಅಧಿಕಾರ ಪತ್ರ (ಪವರ್‌ಆಫ್ ಅಟಾರ್ನಿ) ನೀಡುವ ಮೂಲಕ ಈ ಸಂಬಂಧದಲ್ಲಿ ಪ್ರಾಧಿಕಾರ ಪಡೆದ ಒಬ್ಬ ಏಜೆಂಟನು ಸಹಿ ಮಾಡಿರತಕ್ಕದ್ದು.

3) ಅರ್ಜಿಯು, ನಿಯಮಿಸಬಹುದಾದಂಥ ಇತರ ವಿವರಗಳನ್ನೂ ಸಹ ಒಳಗೊಂಡಿರತಕ್ಕದ್ದು.

(4) ಅರ್ಜಿಯ ಜೊತೆಗೆ ಈ ಮುಂದಿನ ದರಗಳಲ್ಲಿಒಂದು ಲೈಸೆನ್ಸುಫೀಜು ಇರತಕ್ಕದ್ದು.-

| | | |
|---|---|---|
| (ಎ) | ಲೇವಾದೇವಿ ವ್ಯವಹಾರವನ್ನು ನಡೆಸುವ ಸ್ಥಳ ಒಂದಕ್ಕಿಂತ ಹೆಚ್ಚಾಗಿರದಿದ್ದರೆ. | [ಐದು ಸಾವಿರ ರೂಪಾಯಿಗಳು] |
| (ಬಿ) | ಲೇವಾದೇವಿ ವ್ಯವಹಾರವನ್ನು ರಿಜಿಸ್ಟ್ರಾರನ ಪ್ರದೇಶ ಪರಿಮಿತಿಗಳೊಳಗೆ ಒಂದ್ವಕ್ಕಿAದ ಹೆಚ್ಚು ಸ್ಥಳದಲ್ಲಿ ನಡೆಸಬೇಕಾದರೆ. | ವ್ಯವಹಾರದ ಪ್ರಧಾನ ಸ್ಥಳಕ್ಕಾಗಿ [ಐದು ಸಾವಿರ ರೂಪಾಯಿಗಳು] ಮತ್ತು ಆ ಪ್ರದೇಶದಲ್ಲಿಯ ಇತರ ಸ್ಥಳಗಳ ಪೈಕಿ ಪ್ರತಿಯೊಂದಕ್ಕೆ [ಎರಡು ಸಾವಿರದ ಐದು ನೂರು ರೂಪಾಯಿಗಳು] |

ಪರಂತು. ಅಂಥ ಅರ್ಜಿಯ ಸಂಬಂಧದಲ್ಲಿ ನಿಯಮಗಳ ಮೂಲಕ ನಿಯಮಿಸಲಾದ ಅವಧಿಯ ಮುಕ್ತಾಯದ ತರುವಾಯ ಅರ್ಜಿಯನ್ನು ಸಲ್ಲಿಸಿದಲ್ಲಿ, ಅದು ಮೇಲೆ ನಿರ್ದಿಷ್ಟಪಡಿಸಲಾದ ದರದ ಎರಡರಷ್ಟುದರದಲ್ಲಿ ಲೈಸೆನ್ಸ್ಫೀಜನ್ನು ಒಳಗೊಂಡಿರತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ಫೀಜನ್ನು ನಿಯಮಿಸಲಾದ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು ಮತ್ತು ಲೈಸೆನ್ಸ್‌ಮಂಜೂರಾತಿಯನ್ನು ತಿರಸ್ಕರಿಸಲಾಗಿದ್ದರೂ ಅಥವಾ ಅರ್ಜಿಯನ್ನು ಹಿಂತೆಗೆದುಕೊಂಡಿದ್ದರೂಫೀಜನ್ನು ಮರುಸಂದಾಯ ಮಾಡತಕ್ಕದ್ದಲ್ಲ.

**ಕಲಂ 7.** ಲೈಸೆನ್ಸಿನ ಮಂಜೂರಾತಿ ಮತ್ತು ರಿಜಿಸ್ಟರಿನಲ್ಲಿ ನಮೂದನೆ (Grant of licence and entry in register).-(1) 6ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ನಿಯಮಿಸಲಾದ ಕಾರ್ಯ ವಿಧಾನಕ್ಕನುಸಾರವಾಗಿ ಒಂದು ಸಂಕ್ಷಿಪ್ತ ವಿಚಾರಣೆಯನ್ನು ನಡೆಸಿದ ತರುವಾಯ, ಸಹಾಯಕ ರಿಜಿಸ್ಟ್ರಾರನು ತನ್ನ ವರದಿಯೊಂದಿಗೆ ಅರ್ಜಿಯನ್ನು ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು, ರಿಜಿಸ್ಟ್ರಾರನು, ತಾನು ಸೂಕ್ತವೆಂದು ಭಾವಿಸುವಂಥ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ. ಅದನ್ನು ನಡೆಸಿದ ತರುವಾಯ ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಮತ್ತು [7-ಎ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಮತ್ತು ಅಂಥ ಇತರ ಷರತ್ತುಗಳಿಗೆ ಒಳಪಟ್ಟು) ಅರ್ಜಿದಾರನಿಗೆ ಒಂದು ಲೈಸೆನ್ಸನ್ನು ಮಂಜೂರು ಮಾಡಬಹುದು ಮತ್ತು 4 ನೇ ಪ್ರಕರಣದ ಅಡಿಯಲ್ಲಿ ಸಹಾಯಕ ರಿಜಿಸ್ಟ್ರಾರನು

ಇಟ್ಟಿರುವ ರಿಜಿಸ್ಟರಿನಲ್ಲಿ ಅಂಥ ಅರ್ಜಿದಾರನ ಹೆಸರನ್ನು ನಮೂದಿಸುವಂತೆ ಅವರಿಗೆ ನಿರ್ದೇಶಿಸಬಹುದು ಅರ್ಜಿಯು, ರಿಜಿಸ್ಟ್ರಾರನ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ಒಂದಕ್ಕಿಂತ ಹೆಚ್ಚು ವ್ಯಾಪಾರ ಸ್ಥಳಕ್ಕೆ ಸಂಬಂಧಿಸಿದ್ದರೆ, ಅಂಥ ಪ್ರತಿಯೊಂದು ಸ್ಥಳದಲ್ಲಿ ಸಂಬಂಧಲ್ಲಿ ಅರ್ಜಿದಾರನ ಮತ್ತು ಅಂಥ ಸ್ಥಳದಲ್ಲಿಯ ವ್ಯವಹಾರದ ನಿರ್ವಹಣೆಗಾಗಿ ಜವಾಬ್ದಾರನಾದ ವ್ಯಕ್ತಿಯ ಹೆಸರಿನಲ್ಲಿ ಪ್ರತ್ಯೇಕ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದು.

(2) ರಾಜ್ಯದೊಳಗಿನ ಯಾವುದೇ ಸ್ಥಳದಲ್ಲಿ, ಆದರೆ ಲೇವಾದೇವಿದಾರನ ಪ್ರಧಾನ ವ್ಯವಹಾರ ಸ್ಥಳದ ಸಂಬಂಧದಲ್ಲಿ ಲೈಸೆನ್ಸನ್ನು ಮಂಜೂರು ಮಾಡಿದ ರಿಜಿಸ್ಟ್ರಾರನಅಧಿಕಾರ ವ್ಯಾಪ್ತಿಯ ಹೊರಗಿರುವ ಒಂದು ಸ್ಥಳದಲ್ಲಿ ಲೇವಾದೇವಿ ವ್ಯವಹಾರ ನಡೆಸಲು ಒಂದು ಲೈಸೆನ್ಸಿನ ಮಂಜೂರಾತಿಗಾಗಿನ ಒಂದು ಕೋರಿಕೆಯನ್ನು ಸಹ ಅರ್ಜಿಯು ಒಳಗೊಂಡಿದ್ದರೆ. ರಿಜಿಸ್ಟ್ರಾರನು ಅರ್ಜಿಯ ಮತ್ತು ಮಂಜೂರಾದ ಲೈಸೆನ್ಸಿನ ಪ್ರತಿಗಳನ್ನು ಅಧಿಕಾರ ವ್ಯಾಪ್ತಿಹೊಂದಿರುವ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು, ಅವನು, ಅರ್ಜಿಯ ಸಂಬಂಧದಲ್ಲಿ ಯಾವುದೇ ವಿಚಾರಣೆಯನ್ನು ಮಾಡದೇ 6ನೇ ಪ್ರಕರಣದಲ್ಲಿ ಹೇಳಲಾದ ಲೈಸೆನ್ಸ್ ಫೀಜನ್ನು ಸಂದಾಯ ಮಾಡಿದ ಮೇಲೆ ಲೈಸೆನ್ಸನ್ನು ಮಂಜೂರು ಮಾಡಬಹುದು.

**[7-ಎ. ಲೈಸನ್ಸಿನಷರತ್ತುಗಳು (Conditions of licence)**–[(1)7 ನೇ ಪ್ರಕರಣದ ಅಡಿಯಲ್ಲಿ ಮೊದಲ ಬಾರಿಗೆ ಒಂದು ಲೈಸನ್ಸಿನ ಮಂಜೂರಾತಿಗಾಗಿ ಅಥವಾ ತರುವಾಯದ ಅವಧಿಗಾಗಿ ಆ ಪ್ರಕರಣದ ಅಡಿಯಲ್ಲಿ ಹೊಸಲೈಸೆನ್ಸಿನ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಲೇವಾದೇವಿದಾರನು. ಅಂಥ ಅರ್ಜಿಯನ್ನು ಸಲ್ಲಿಸುವಾಗ, (2)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಲಾದ ಭದ್ರತಾ ಠೇವಣಿಯನ್ನು ಸಂದಾಯ ಮಾಡತಕ್ಕದ್ದು.]

(2) ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟ ಪಡಿಸಿದ ಪ್ರತಿಯೊಬ್ಬ ಲೈಸೆನ್ಸದಾರನು, ಲೈಸೆನ್ಸ್ಷರತ್ತುಗಳಯುಕ್ತ ಪಾಲನೆಗೆ ಭದ್ರತೆಯಾಗಿ ಸದರಿ ಕೋಷ್ಟಕದ (3)ನೇ ಅಂಕಣದ ಸಂವಾದಿನಮೂದಿನಲ್ಲಿ ನಿರ್ದಿಷ್ಟ ಪಡಿಸಲಾದ ಮೊಬಲಗನ್ನು ನಿಯಮಿಸಲಾದ ರೀತಿಯಲ್ಲಿ ಸರ್ಕಾರದ ಖಜಾನೆಯಲ್ಲಿ ಠೇವಣಿಯಾಗಿ ಇಡತಕ್ಕದ್ದು.

**ಕೋಷ್ಟಕ**

| | | |
|---|---|---|
| 1 | ಒಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಿಂತ ಕಡಿಮೆ [ಬಂಡವಾಳ ತೊಡಗಿಸುವ] ಲೈಸೆನ್ಸ್ದಾರ. | ಐದು ಸಾವಿರ ರೂಪಾಯಿಗಳು. |
| 2 | ಒಂದು ವರ್ಷದಲ್ಲಿ ಒಂದು ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟು ಮತ್ತು ಐದು ಲಕ್ಷಕ್ಕಿಂತ ಕಡಿಮೆ [ಬಂಡವಾಳತೊಡಗಿಸುವ] ಲೈಸೆನ್ಸ್ದಾರ. | ಹತ್ತುಸಾವಿರರೂಪಾಯಿಗಳು. |
| 3 | ಒಂದು ವರ್ಷದಲ್ಲಿ ಐದು ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟು ಆದರೆ ಹತ್ತು ಲಕ್ಷಕ್ಕಿಂತ ಕಡಿಮೆ [ಬಂಡವಾಳತೊಡಗಿಸುವ] ಲೈಸೆನ್ಸ್ದಾರ. | ಇಪ್ಪತ್ತೈದು ಸಾವಿರ ರೂಪಾಯಿಗಳು |
| 4 | ಒಂದು ವರ್ಷದಲ್ಲಿ ಹತ್ತು ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟು [ಬಂಡವಾಳ ತೊಡಗಿಸುವ) ಲೈಸೆನ್ಸ್ದಾರ. | ಐವತ್ತು ಸಾವಿರ ರೂಪಾಯಿಗಳು |

(3) (2)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ, ಲೈಸೆನ್ಸ್ದಾರನು ಒಂದು ವರ್ಷದಲ್ಲಿ ಸಂದಾಯ ಮಾಡಬೇಕಾದ ಭದ್ರತೆಯ ಮೊಬಲಗನ್ನು [ಅವನು ಹಿಂದಿನ ವರ್ಷದ ಅವಧಿಯಲ್ಲಿ ವ್ಯವಹಾರದಲ್ಲಿ ತೊಡಗಿಸಿದ ಮೊತ್ತವನ್ನು] ಆಧರಿಸಿ ನಿರ್ಧರಿಸತಕ್ಕದ್ದು, [ಮತ್ತು ಅಂಥ ಭದ್ರತಾ ಠೇವಣಿಗೆ ಯಾವುದೇ ಬಡ್ಡಿ ಇರತಕ್ಕದ್ದಲ್ಲ.]

ಪರಂತು, ಹೊಸ ಲೈಸೆನ್ಸ್ದಾರನ ಅಥವಾ ಹಿಂದಿನ ವರ್ಷದ ಒಂದು ಭಾಗಕ್ಕೆ ಮಾತ್ರ ಲೈಸೆನ್ಸ್ದಾರನಾಗಿದ್ದ ವ್ಯಕ್ತಿಯ ಸಂದರ್ಭದಲ್ಲಿ, ಭದ್ರತಾ ಮೊಬಲಗನ್ನು, ವರ್ಷದ ಅವಧಿಯಲ್ಲಿ ಅವನು [ಬಂಡವಾಳ ತೊಡಗಿಸುವ] ಸಂಭವ ವಿರುವ ಮೊಬಲಗಿಗೆ ಸಂಬಂಧಿಸಿದಂತೆ ನಿಯಮಿಸಲಾದ ನಮೂನೆಯಲ್ಲಿ, ನಿಯಿಸಲಾದ ರೀತಿಯಲ್ಲಿ ರಿಜಿಸ್ಟ್ರಾರರ ಮುಂದೆ ದಾಖಲು ಮಾಡಿ ಘೋಷಣೆಯ ಆಧಾರದ ಮೇಲೆ ನಿರ್ಧರಿಸತಕ್ಕದ್ದು.

## 2.ಗಿರವಿದಾರರ ಸಂಸ್ಥೆಗಳ ಸ್ಥಾಪನೆಗೆ ಹಾಗೂ ಕಾರ್ಯನಿರ್ವಹಣೆಯ ಕುರಿತ ಕರ್ನಾಟಕ ಗಿರಿವಿದಾರರ ಅಧಿನಿಯಮ 1961 ರಲ್ಲಿನ ಅವಕಾಶಗಳು

**ಕಲಂ 3.ಗಿರವಿದಾರನು ಲೈಸೆನ್ಸನ್ನು ಪಡೆಯತಕ್ಕದ್ದು (Pawn-broker to obtain licence)–** ಯಾರೇ ವ್ಯಕ್ತಿಯು, ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮದ ಉಪಬಂಧಗಳು ಜಾರಿಗೆ ಬರುವಂಥ ದಿನಾಂಕ ದಿಂದ ಆರು ತಿಂಗಳುಗಳು ಮುಕ್ತಾಯವಾದ ತರುವಾಯ, ಈ ಅಧಿನಿಯಮದ ಮೇರೆಗೆಗಿರ ವಿದಾರನ ಲೈಸೆನ್ನನ್ನು ಪಡೆದುಕೊಂಡಿದ್ದ ಹೊರತು ಅಂಥ ಪ್ರದೇಶದಲ್ಲಿ ಯಾವುದೇ ಸ್ಥಳದಲ್ಲಿ ಗಿರವಿದಾರನೆಂದು ವ್ಯವಹಾರವನ್ನು [ಮತ್ತು ಕರ್ನಾಟಕ ಗಿರವಿದಾರರ (ತಿದ್ದುಪಡಿ) ಅಧಿನಿಯಮ, 1985 ರಪ್ರಾರಂಭದ ತರುವಾಯ 4–ಎ ಪ್ರಕರಣದಲ್ಲಿ ಉಪಬಂಧಿಸಿದಂತೆ ಭದ್ರತಾ ಠೇವಣಿಯನ್ನು ಸಂದಾಯ ಮಾಡಿದ ಮೇಲೆ ಹೊರತು] ನಡೆಸತಕ್ಕದ್ದಲ್ಲಅಥವಾ ನಡೆಸುವುದನ್ನು ಮುಂದುವರಿಸತಕ್ಕದ್ದಲ್ಲ.

ವಿವರಣೆ 1.–ಅದೇ ಪಟ್ಟಣದಲ್ಲಿಯೇ ಆಗಲಿ ಅಥವಾ ಗ್ರಾಮದಲ್ಲಿಯೇ ಆಗಲಿ ಅಥವಾ ಬೇರೆ ಬೇರೆ ಪಟ್ಟಣಗಳಲ್ಲಿ ಮತ್ತು ಗ್ರಾಮಗಳಲ್ಲಿಯೇ ಆಗಲಿ ಒಂದಕ್ಕಿಂತ ಹೆಚ್ಚು ಅಂಗಡಿಯನ್ನು ಅಥವಾ ವ್ಯವಹಾರದ ಸ್ಥಳವನ್ನು ಗಿರವಿದಾರನು ಹೊಂದಿದ್ದರೆ ಅವನು ಅಂಥ ಪ್ರತಿಯೊಂದು ಅಂಗಡಿಗೆ ಅಥವಾ ವ್ಯವಹಾರದ ಸ್ಥಳಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಗಿರವಿದಾರನ ಲೈಸೆನ್ಸನ್ನು ಪಡೆಯತಕ್ಕದ್ದು.

ವಿವರಣೆ 2.–ಈ ಅಧಿನಿಯಮದ ಮೇರೆಗೆ ಮಂಜೂರು ಮಾಡಿದ ಪ್ರತಿಯೊಂದು ಗಿರವಿದಾರನಲೈಸೆನ್ನು, [ಐದು ವರ್ಷಗಳ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು ಆದರೆ, ಅದನ್ನುಅವಧಿಯಿಂದ ಅವಧಿಗೆ ನವೀಕರಿಸಬಹುದು.]

ವಿವರಣೆ 3.–ವರ್ಷದ ಮಧ್ಯದಲ್ಲಿ ಲೈಸೆನ್ಸನ್ನು ಮಂಜೂರು ಮಾಡಿದ್ದರೆ ಲೈಸೆನ್ಸಿನ ಅವಧಿಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ವರ್ಷದ ಉಳಿದಭಾಗವನ್ನು ಒಂದು ವರ್ಷವೆಂದು ಭಾವಿಸತಕ್ಕದ್ದು.]

**ಕಲಂ-4. ಲೈಸೆನ್ಸುಗಳ ಮಂಜೂರಾತಿ ಮತ್ತು ನವೀಕರಣ (Grant and renewal of licences).**–(1) ಗಿರವಿದಾರನ ಲೈಸೆನ್ಸಿನ ಮಂಜೂರಾತಿಗಾಗಿ ಅಥವಾ ನವೀಕರಣಕ್ಕಾಗಿ ಪ್ರತಿಯೊಂದು ಅರ್ಜಿಯು ಬರಹದಲ್ಲಿರತಕ್ಕದ್ದು ಮತ್ತು ಅದನ್ನು ನಿಯಮಿಸಲಾದ ಲೈಸೆನ್ನು ಕೊಡುವ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.

(2) ಈ ಕೆಳಕಂಡ ಕಾರಣಗಳಲ್ಲಿ ಯಾವುದೇ ಕಾರಣದ ಮೇಲೆ ಅಲ್ಲದೆ ಲೈಸೆನ್ಸಿನ ಮಂಜೂರಾತಿಯನ್ನುಅಥವಾ ನವೀಕರಣವನ್ನು ನಿರಾಕರಿಸತಕ್ಕುದಲ್ಲ, ಎಂದರೆ:–

(ಎ) ಅರ್ಜಿದಾರನು ಕೆಟ್ಟನಡತೆಉಳ್ಳವನು;

ವಿವರಣೆ.-ಅರ್ಜಿದಾರನ ಕೆಟ್ಟನಡತೆ ಬಗ್ಗೆ ಯಾವುದೇ ಸಾಕ್ಷ್ಯವನ್ನುಮುಂದಿಟ್ಟರೆ, ಅಂಥ ಸಾಕ್ಷ್ಯವನ್ನು ಖಂಡಿಸಲು ಅವನಿಗೆ ಅವಕಾಶವನ್ನು ಕೊಡತಕ್ಕದ್ದು;

(ಬಿ) ಗಿರವಿದಾರನ ವ್ಯವಹಾರವನ್ನು ನಡೆಸಲು ಉದ್ದೇಶಿಸುವಂಥ ಅಂಗಡಿಯು ಅಥವಾ ಸ್ಥಳವು ಅಥವಾ ಅವನ ಒಡೆತನದಲ್ಲಿರುವ ಅಥವಾ ಅವನ ಅಧಿಭೋಗದಲ್ಲಿರುವ ಯಾವುದೇಪಕ್ಕದಮನೆಗೆ ಅಥವಾ ಅಂಗಡಿಗೆ ಅಥವಾ ಸ್ಥಳಕ್ಕೆ ಕೆಟ್ಟನಡತೆಯ ವ್ಯಕ್ತಿಗಳು ಮೇಲಿಂದ ಮೇಲೆ ಬರುತ್ತಿರುವುದು; ಅಥವಾ

(3) ಲೈಸೆನ್ಸಿನ ಮಂಜೂರಾತಿ ಅಥವಾ ನವೀಕರಣವನ್ನು ನಿರಾಕರಿಸುವ ಆದೇಶದ ಮೂಲಕ ಬಾಧಿತನಾದ ಯಾರೇ ವ್ಯಕ್ತಿಯು, ನಿಯಮಿಸಿದ ಕಾಲದೊಳಗೆ ನಿಯಮಿಸಿದ ಪ್ರಾಧಿಕಾರಿಗೆ ಅಪೀಲನ್ನು ಮಾಡಿಕೊಳ್ಳಬಹುದು.

(4) ಪ್ರತಿಯೊಂದು ಲೈಸೆನ್ಸನ್ನು ನಿಯಮಿಸ ಬಹುದಾದಂಥ ನಮೂನೆಯಲ್ಲಿ ಮತ್ತು [4-ಎ

ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಮತ್ತು ಅಂಥ ಇತರ ಷರತ್ತುಗಳಿಗೊಳಪಟ್ಟು] ಮಂಜೂರು ಮಾಡತಕ್ಕದ್ದು ಅಥವಾ ನವೀಕರಿಸತಕ್ಕದ್ದು.

(5) ಲೈಸೆನ್ಸಿನ ಮಂಜೂರಾತಿಗಾಗಿ ಅಥವಾ ನವೀಕರಣಕ್ಕಾಗಿ ಪ್ರತಿಯೊಂದು ಅರ್ಜಿಯೊಂದಿಗೆ ಈ ಕೆಳಕಂಡ ದರಗಳಲ್ಲಿ ಫೀಜು ಇರತಕ್ಕದ್ದು.-

| | | |
|---|---|---|
| (ಎ) | ವ್ಯವಹಾರವನ್ನು ನಡೆಸಬೇಕಾದಂಥ ಸ್ಥಳವು ಒಂದಕ್ಕಿಂತ ಹೆಚ್ಚಾಗಿಲ್ಲದಿದ್ದರೆ | [ಐದು ಸಾವಿರ ರೂಪಾಯಿಗಳು] |
| (ಬಿ) | ವ್ಯವಹಾರವನ್ನು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನಡೆಸಬೇಕಾಗಿದ್ದರೆ | ಮೂಲ ವ್ಯವಹಾರದ ಸ್ಥಳಕ್ಕೆ ಸ್ಥಳಕ್ಕೆ [ಐದು ಸಾವಿರ ರೂಪಾಯಿಗಳು) ಮತ್ತು ಇತರ ಪ್ರತಿಯೊಂದು ಸ್ಥಳಕ್ಕೆ [ಎರಡು ಸಾವಿರದ ಐದು ನೂರು ರೂಪಾಯಿಗಳು:] |

ಪರಂತು, ಅಂಥ ಅರ್ಜಿಗೆ ಸಂಬಂಧಿಸಿದಂತೆ ನಿಯಮಗಳ ಮೂಲಕ ನಿಯಮಿಸಿದ ಅವಧಿ ಯುಮುಕ್ತಾಯವಾದ ತರುವಾಯ ಅರ್ಜಿಯನ್ನು ಸಲ್ಲಿಸಿದ್ದರೆ [ಮೇಲೆ ನಿರ್ದಿಷ್ಟಪಡಿಸಿದ ಶೇಕಡಾ 50ರಷ್ಟಲ್ಲಿ ಹೆಚ್ಚು ವರಿಪರವಾನಗಿ ಶುಲ್ಕದಷ್ಟಿರತಕ್ಕದ್ದು. ಆದಾಗ್ಯೂ, ಪರವಾನಗಿ ಮುಕ್ತಾಯದ ನಂತರ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬಾರದು.]

(6) ಲೈಸೆನ್ಸಿನ ಮಂಜೂರಾತಿಯನ್ನು ಅಥವಾ ನವೀಕರಣವನ್ನು ನಿರಾಕರಿಸಿದ್ದರೂ ಅಥವಾ ಅರ್ಜಿಯನ್ನು ಹಿಂತೆಗೆದುಕೊಂಡಿದ್ದರೂ, ಈ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು ಮತ್ತು ಅದನ್ನು ಮರುಪಾವತಿ ಮಾಡತಕ್ಕದ್ದಲ್ಲ.

**4-ಎ. ಲೈಸೆನ್ಸಿನ ಷರತ್ತುಗಳು (Conditions of licence).-**(1) 4ನೇ ಪ್ರಕರಣದ ಮೇರೆಗೆ ಲೈಸೆನ್ಸನ್ನು ಮಂಜೂರು ಮಾಡುವಂತೆ ಕೋರಿ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ (2)ನೇ ಉಪ-ಪ್ರಕರಣದ ಮೇರೆಗೆ ಉಪಬಂಧಿಸಲಾದಂತ ಭದ್ರತಾ ಠೇವಣಿಯನ್ನು ಸಂದಾಯ ಮಾಡತಕ್ಕದ್ದು ಮತ್ತುಅಂಥ ಲೈಸೆನ್ಸನ್ನು ನವೀಕರಿಸುವಂತೆ ಕೋರಿ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ, ಅಂಥ ಲೈಸೆನ್ಸಿನ ಅವಧಿಮುಗಿಯುವ ಎರಡು ತಿಂಗಳ ಮುಂಚೆ ಭದ್ರತಾ ಠೇವಣಿಯನ್ನು ಸಂದಾಯ ಮಾಡತಕ್ಕದ್ದು.]

(2) ಕೆಳಗಿನ ಕೋಷ್ಟಕದ (1)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಬ್ಬ ಲೈಸೆನ್ಸುದಾರನು ನಿಯಮಿಸಿದ ರೀತಿಯಲ್ಲಿ ಆಲೈಸೆನ್ಸಿನ ಷರತ್ತುಗಳಯುಕ್ತಪಾಲನೆಗಾಗಿ ಠೇವಣಿಯ ರೂಪದಲ್ಲಿ ಸದರಿ ಕೋಷ್ಟಕದ (2)ನೇ ಅಂಕಣದಲ್ಲಿನ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನುಸರ್ಕಾರಿ ಖಜಾನೆಯಲ್ಲಿ ಠೇವಣಿ ಇಡತಕ್ಕದ್ದು.

**ಕೋಷ್ಟಕ**

| | | |
|---|---|---|
| 1 | ಒಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ [ಹಣ ಹೂಡುವಲೈಸೆನ್ಸುದಾರ | ಐದು ಸಾವಿರ ರೂಪಾಯಿಗಳು |
| 2 | ಒಂದು ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚುಐದು ಲಕ್ಷಕ್ಕಿಂತ ಕಡಿಮೆ [ಹಣ ಹೂಡುವು ಲೈಸೆನ್ಸುದಾರ | ಹತ್ತು ಸಾವಿರ ರೂಪಾಯಿಗಳು |
| 3 | ಒಂದು ವರ್ಷದಲ್ಲಿ ಐದು ಲಕ್ಷ ರೂಪಾಯಿಗಳಿಗಿಂತ ಹೆಚ್ಚುಹತ್ತು ಲಕ್ಷಕ್ಕಿಂತ ಕಡಿಮೆ [ಹಣ ಹೂಡುವ ಲೈಸೆನ್ಸುದಾರ | ಇಪ್ಪತ್ತೈದು ಸಾವಿರ ರೂಪಾಯಿಗಳು |
| 4 | ಒಂದು ವರ್ಷದಲ್ಲಿ ಹತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣ ಹೂಡುವ) ಲೈಸೆನ್ಸುದಾರ | ಐವತ್ತು ಸಾವಿರ ರೂಪಾಯಿಗಳು |

(3) (2)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ ಒಂದು ವರ್ಷದಲ್ಲಿ ಒಬ್ಬಲೈಸೆನ್ಸುದಾರನು ಸಂದಾಯ ಮಾಡಬೇಕಾದ ಭದ್ರತೆಯ ಮೊಬಲಗನ್ನು [ಹಿಂದಿನ ವರ್ಷದಲ್ಲಿ ಅವನು ಸಾಲವಾಗಿ ವ್ಯವಹಾರದಲ್ಲಿ ಹೂಡಿದ ಮೊಬಲಗಿನ] ಆಧಾರದ ಮೇಲೆ ನಿರ್ಧರಿಸತಕ್ಕದ್ದು [ಮತ್ತುಅಂಥ ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೀಡತಕ್ಕದ್ದಲ್ಲ:

[ಮತ್ತೂ ಪರಂತು, ಹೊಸ ಲೈಸೆನ್ಸುದಾರನ ಅಥವಾ ಹಿಂದಿನ ವರ್ಷದ ಒಂದು ಭಾಗಕ್ಕೆ ಮಾತ್ರ ಲೈಸೆನ್ಸ್ಪಡೆದಿರುವ ಒಬ್ಬ ವ್ಯಕ್ತಿಯ ಸಂದರ್ಭದಲ್ಲಿ, ಭದ್ರತಾ ಠೇವಣಿಯ ಮೊತ್ತವನ್ನು ಆ ವರ್ಷದಲ್ಲಿ ಅವನು ಹೂಡುವ ಸಂಭವವಿರುವಂಥ ಮೊತ್ತಕ್ಕೆ ಸಂಬಂಧಪಟ್ಟಂತೆ ನಿಯಮಿಸಲಾದ ನಮೂನೆಯಲ್ಲಿ ಸಲ್ಲಿಸಿದ ಘೋಷಣೆಯ ಆಧಾರದ ಮೇಲೆ ನಿರ್ಧರಿಸತಕ್ಕದ್ದು.]

**ಕಲಂ-4ಬಿ. ಭದ್ರತೆಯ ಮುಟ್ಟುಗೋಲು(Forfeiture of security)**.-(1) ಲೈಸೆನ್ಸುಕೊಡುವ ಪ್ರಾಧಿಕಾರವು ಯಾವುದೇಕಾಲದಲ್ಲಿ ಲಿಖಿತ ಆದೇಶದ ಮೂಲಕ 4-ಎ ಪ್ರಕರಣದ

(2)ನೇಉಪ-ಪ್ರಕರಣದ ಮೇರೆಗೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡಲಾಗಿದೆಯೆಂದು ಭಾವಿಸಲಾದ ಭದ್ರತಾ ಠೇವಣಿಯ ಪೂರ್ಣ ಅಥವಾ ಯಾವುದೇ ಭಾಗವನ್ನು.

(ಎ) ಲೈಸನ್ಸುದಾರನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದನಿಯಮಗಳ ಯಾವುದೇ ಉಪಬಂಧವನ್ನು ಅಥವಾ ಲೈಸೆನ್ಸಿನಷರತ್ತುಗಳನ್ನು ಉಲ್ಲಂಘಿಸಿಹಣವನ್ನು ಸಾಲನೀಡು ವವ್ಯವಹಾರವನ್ನುನಡೆಸಿದರೆ; ಅಥವಾ

(ಬಿ) 9ನೇಪ್ರಕರಣದ (3)ನೇಉಪ-ಪ್ರಕರಣದ, 15ನೇಪ್ರಕರಣದ, 16ನೇಪ್ರಕರಣದ ಅಥವಾ 16-ಎ ಪ್ರಕರಣದ ಅಥವಾ 18ನೇ ಪ್ರಕರಣದ ಮೇರೆಗೆ ಅಪರಾಧದ ಬಗ್ಗೆ ಅಪರಾಧಿ ಎಂದು ನಿರ್ದೇತನಾದರೆ; ಅಥವಾ

(ಸಿ) ಸುಳ್ಳು ಲೆಕ್ಕಪತ್ರಗಳನ್ನು ನಿರ್ವಹಿಸುತ್ತಿದ್ದರೆ, -ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಭದ್ರತಾ ಠೇವಣಿಯ ಪೂರ್ಣ ಅಥವಾ ಯಾವುದೇ ಭಾಗವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಮುಂಚೆ, ಲೈಸೆನ್ಸು ಕೊಡುವ ಪ್ರಾಧಿಕಾರವುಲೈಸೆನ್ಸುದಾರನಿಗೆ ಬರಹದಲ್ಲಿ, ಯಾವ ಕಾರಣಗಳಿಗಾಗಿ ಕ್ರಮವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆಯೋ ಕಾರಣಗಳನ್ನು ನಿರೂಪಿಸಿಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಅದರ ವಿರುದ್ಧ ಕಾರಣವನ್ನು ತೋರಿಸಲು ಅವನನ್ನು ಅಗತ್ಯಪಡಿಸಿ ನೋಟೀಸನ್ನುಕೊಡತಕ್ಕದ್ದು.

(3) ಈ ಪ್ರಕರಣದ ಮೇರೆಗಿನ ಅತ್ಯನ್ನು ಕೊಡುವ ಪ್ರತಿಯೊಂದು ಆದೇಶವನ ನಿಯಮಿಸಬಹುದಾದಂಥ ರೀತಿಯಲ್ಲಿ ಲೈಸೆನ್ಸುದಾರನಿಗೆತಿಳಿಸತಕ್ಕದ್ದು.

(4) (1)ನೇಉಪ-ಪ್ರಕರಣ ದ ಮೇರೆಗಿನ ಆವೇಶದ ಮೂಲಕ ಬಾಧಿತನಾದ ಪ್ರತಿಯೊಬ ವ್ಯಕ್ತಿಯೂ, ಅವನಿಗೆ ಆದೇಶವನ್ನು ತಿಳಿಸಿದಂಥ ದಿನಾಂಕದಿಂದ ಒಂದು ತಿಂಗಳ ಅವಧಿಯೊಳ ನಿಯಮಿಸಿದ ಪ್ರಾಧಿಕಾರಿಗೆ ಅಪೀಲನ್ನು ಸಲ್ಲಿಸಬಹುದು. ಅವನ ತೀರ್ಮಾನವು ಅಂತಿಮವಾಗಿರಲಿದೆ

(5) ಲೈಸೆನ್ಸು ಕೊಡುವ ಪ್ರಾಧಿಕಾರವು ಮುಟ್ಟುಗೋಲು ಹಾಕಿಕೊಂಡ ಮೊಬಲಗಿನಿಂದ ನಿಯಮಿಸಬಹುದಾದಂಥ ಮೊಬಲಗು ಮತ್ತು ಅಂಥ ದರಗಳಲ್ಲಿ ಲೈಸೆನ್ಸುದಾರನ ಕಾರ್ಯನಮೂಲಕ ಬಾಧಿತರಾದ ಸಾಲ ತೆಗೆದುಕೊಂಡಿರುವವರಿಗೆ ಸಂದಾಯ ಮಾಡಲು ನಿರ್ದೇಶಿಸಬಹುದು

**ಕಲಂ-5. ಗಿರವಿದಾರರು ಅಂಗಡಿಗಳ ಮೇಲೆ ಅವರ ಹೆಸರುಗಳನ್ನು ಪ್ರದರ್ಶಿಸುವುದು, ಇತ್ಯಾದಿ (Pawn-brokers to exhibit their names over shops, etc.)**ಪ್ರತಿಯೊಬ್ಬ ಗಿರವಿದಾರನು.-

(ಎ) ಅವನ ಅಂಗಡಿಯ ಅಥವಾ ವ್ಯವಹಾರ ಸ್ಥಳದಹೊರಬಾಗಿಲಿನ ಮೇಲೆ ದೊಡ್ಡ ಅಕ್ಷರಗಳಲ್ಲಿ ಗಿರವಿದಾರ ಎಂಬ ಪದದೊಂದಿಗೆ ಅವನ ಹೆಸರನ್ನು ಇಂಗ್ಲಿಷಿನಲ್ಲಿ ಮತ್ತು ಕನ್ನಡದಲ್ಲಿ ಅದಕ್ಕೆ ಸಮನಾದುದನ್ನು ಯಾವಾಗಲೂ ಪ್ರದರ್ಶಿಸಿ ಇಡತಕ್ಕದ್ದು; ಮತ್ತು "

(ಬಿ) ಅವನ ಅಂಗಡಿಯ ಅಥವಾ ವ್ಯವಹಾರದ ಸ್ಥಳದ ಎದ್ದು ಕಾಣುವ ಭಾಗದಲ್ಲಿ ಅಲ್ಲಿಗೆ ಹೋಗಿಬರುವ ಎಲ್ಲಾ ವ್ಯಕ್ತಿಗಳಿಗೆ ಸ್ಪಷ್ಟವಾಗಿ ಕಾಣುವ ಹಾಗೆ ಕನ್ನಡ ಭಾಷೆಯಲ್ಲಿ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಗಿರವಿ ಚೀಟಿಗಳ ಮೇಲೆ ಮುದ್ರಿಸಬೇಕೆಂದು ಅಗತ್ಯಪಡಿಸಿದ ಮಾಹಿತಿಯನ್ನು, ಯಾವಾಗಲೂ ಇಟ್ಟಿರತಕ್ಕದ್ದು.

**ಕಲಂ-6. ಗಿರವಿದಾರರಿಗೆ ಅನುಮತಿಸಲಾದ ಬಡ್ಡಿ ಮತ್ತು ವೆಚ್ಚಗಳು(Interest and charges allowed to pawn-brokers).**–(1)
ಯಾರೇ ಗಿರವಿದಾರನು ಒತ್ತೆಯ ಮೇಲಿನ ಸಾಲಕ್ಕೆ ಸಂಬಂಧಿಸಿದಂತೆ ವರ್ಷಕ್ಕೆ ಶೇಕಡಾ ಒಂಬತ್ತನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಇತರ ದರವನ್ನು ಮೀರುವದರದಲ್ಲಿ ಸರಳ ಬಡ್ಡಿಯನ್ನು ವಿಧಿಸತಕ್ಕದ್ದಲ್ಲ.

(2) ಗಿರವಿದಾರನು ಗಿರವಿ ಇಟ್ಟವನಿಂದ, ನಿಯಮಿಸಬಹುದಾದಂಥ ವೆಚ್ಚಗಳನ್ನು ಮತ್ತುಅಂಥ ಪ್ರಕರಣಗಳಲ್ಲಿ ತಗಾದೆ ಮಾಡಬಹುದು ಮತ್ತು ತೆಗೆದುಕೊಳ್ಳಬಹುದು.

(3) ಗಿರವಿದಾರನು, ಗಿರವಿ ಇಟ್ಟವನಿಂದತನಗೆ ಬಾಕಿ ಬರಬೇಕಾದ ಬಡ್ಡಿ ಮತ್ತು (2)ನೇಉಪ-ಕರಣದಲ್ಲಿಉಲ್ಲೇಖಿಸಿದ ವೆಚ್ಚವು ಯಾವುದಾದರೂ ಇದ್ದರೆ ಅದನ್ನು ಹೊರತುಪಡಿಸಿ, ಯಾವುದೇ ಲಾಭವನ್ನು, ಬಡ್ಡಿಯನ್ನು, ವೆಚ್ಚವನ್ನು ಅಥವಾ ಇತರ ಯಾವುದಾದರೂ ಆದ ಮೊತ್ತವನ್ನು ತಗಾದೆ ಮಾಡತಕ್ಕುದಲ್ಲ ಅಥವಾ ತೆಗೆದುಕೊಳ್ಳತಕ್ಕದ್ದಲ್ಲ.

**ಕಲಂ-7. ಗಿರವಿ ಇಟ್ಟವನಿಗೆ ಗಿರವಿ ಚೀಟಿಯನ್ನುಕೊಡತಕ್ಕದ್ದು(Pawn-ticket to be given to pawner)**-ಪ್ರತಿಯೊಬ್ಬ ಗಿರವಿದಾರನುಗಿರವಿಗೆ ಒತ್ತೆಯನ್ನು ಇಟ್ಟುಕೊಂಡ ಮೇಲೆ ಗಿರವಿ ಇಟ್ಟವನಿಗೆ, ನಿಯಮಿಸಿದ ನಮೂನೆಯಲ್ಲಿ ಗಿರವಿದಾರನು ಮತ್ತು ಗಿರವಿ ಇಟ್ಟವರು ಜುಮಾಡಿದ ಗಿರವಿ ಚೀಟಿಯನ್ನು ಕೊಡತಕ್ಕದ್ದು ಮತ್ತು ಗಿರವಿ ಇಟ್ಟವನು ಗಿರವಿ ಚೀಟಿಯನ್ನು ತೆಗೆದುಕೊಂಡ ಹೊರತು. ಗಿರವಿಗೆ ಒತ್ತೆಯನ್ನುಇಟ್ಟುಕೊಳ್ಳತಕ್ಕದ್ದಲ್ಲ.

(ಕ್ಯಾಪ್ಟನ್, ಡಾ.ಕೆ.ರಾಜೇಂದ್ರ ಭಾ.ಆ.ಸೇ)
ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ,ಬೆಂಗಳೂರು.

## ಅನುಬಂಧ "2"

ರಾಜ್ಯದಲ್ಲಿ ದಿನಾಂಕ.31-03-2023ರ ಅಂತ್ಯಕ್ಕೆ ಇರುವ ಹಣಕಾಸು, ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳ ವರ್ಗವಾರು ಮತ್ತು ಜಿಲ್ಲಾವಾರು ಮಾಹಿತಿ.

| ಕ್ರ.ಸಂ | ಜಿಲ್ಲೆಯ ಹೆಸರು | ಹಣಕಾಸು ಸಂಸ್ಥೆಗಳು | | ಗಿರವಿ ಲೈಸನ್ಸ ಪಡೆದವರಲ್ಲಿ | | |
|---|---|---|---|---|---|---|
| | | ಲೇವಾದೇವಿ ದಾರರು | ಹಣಕಾಸು ಸಂಸ್ಥೆಗಳು | ಲೇವಾದೇವಿ ದಾರರು | ಹಣಕಾಸುದಾರರು | |
| 1 | 1ನೇ ವಲಯ | 1318 | 0 | 775 | 0 | 775 |
| 2 | 2ನೇ ವಲಯ | 0 | 0 | 156 | 423 | 579 |
| 3 | 3ನೇ ವಲಯ | 719 | 5 | 248 | 0 | 248 |
| 4 | 4ನೇ ವಲಯ | 263 | 0 | 164 | 0 | 164 |
| 5 | ಬೆಂಗಳೂರು ಗ್ರಾ | 87 | 0 | 232 | 0 | 232 |
| 6 | ರಾಮನಗರ | 248 | 45 | 180 | 0 | 180 |
| 7 | ತುಮಕೂರು | 151 | 94 | 0 | 0 | 0 |
| 8 | ಕೋಲಾರ | 360 | 0 | 364 | 0 | 364 |
| 9 | ಚಿಕ್ಕಬಳ್ಳಾಪುರ | 115 | 155 | 206 | 0 | 206 |
| 10 | ಚಿತ್ರದುರ್ಗ | 36 | 229 | 219 | 484 | 703 |
| 11 | ದಾವಣಗೆರೆ | 13 | 218 | 212 | 443 | 655 |
| 12 | ಶಿವಮೊಗ್ಗ | 114 | 342 | 348 | 0 | 348 |
| | ಒಟ್ಟು | 3424 | 1088 | 3104 | 1350 | 4454 |
| 1 | ಮೈಸೂರು | 849 | 612 | 874 | 0 | 874 |
| 2 | ಚಾಮರಾಜನಗರ | 59 | 104 | 208 | 0 | 208 |
| 3 | ಮಂಡ್ಯ | 54 | 370 | 0 | 481 | 481 |
| 4 | ಹಾಸನ | 313 | 306 | 299 | 918 | 1217 |
| 5 | ಚಿಕ್ಕಮಗಳೂರು | 116 | 42 | 114 | 272 | 386 |
| 6 | ಕೊಡಗು | 109 | 161 | 70 | 68 | 138 |
| 7 | ದಕ್ಷಿಣ ಕನ್ನಡ | 245 | 66 | 170 | 481 | 651 |
| 8 | ಉಡುಪಿ | 0 | 151 | 0 | 44 | 44 |
| | ಒಟ್ಟು | 1745 | 1812 | 1735 | 2264 | 3999 |
| 1 | ಬೆಳಗಾವಿ | 117 | 1465 | 182 | 120 | 302 |
| 2 | ವಿಜಯಪುರ | 45 | 230 | 40 | 81 | 121 |
| 3 | ಬಾಗಲಕೋಟೆ | 53 | 297 | 31 | 50 | 81 |
| 4 | ಧಾರವಾಡ | 631 | 270 | 97 | 0 | 97 |
| 5 | ಗದಗ | 291 | 175 | 33 | 31 | 64 |
| 6 | ಹಾವೇರಿ | 102 | 112 | 21 | 0 | 21 |
| 7 | ಉತ್ತರಕನ್ನಡ | 114 | 54 | 20 | 0 | 20 |
| | ಒಟ್ಟು | 1353 | 2603 | 424 | 282 | 706 |
| 1 | ಬಳ್ಳಾರಿ | 255 | 70 | 209 | 0 | 209 |
| 2 | ಬೀದರ | 27 | 151 | 3 | 3 | 6 |
| 3 | ಕಲಬುರಗಿ | 27 | 841 | 65 | 0 | 65 |
| 4 | ಕೊಪ್ಪಳ | 162 | 227 | 56 | 445 | 501 |
| 5 | ರಾಯಚೂರು | 42 | 55 | 33 | 0 | 33 |
| 6 | ಯಾದಗಿರಿ | 0 | 599 | 7 | 0 | 7 |
| | ಒಟ್ಟು | 513 | 1943 | 373 | 448 | 821 |
| | **ಒಟ್ಟು** | 7035 | 7446 | 5636 | 4344 | 9980 |

## ಅನುಬಂಧ "2"

### ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳ ವರ್ಗವಾರು ಮತ್ತು ಜಿಲ್ಲಾವಾರು ಮಾಹಿತಿ.

| ಕ್ರ.ಸಂ | ಜಿಲ್ಲೆಯ ಹೆಸರು | ಲೇವಾದೇವಿ ದಾರರು | ಹಣಕಾಸು ಸಂಸ್ಥೆಗಳು | ಲೇವಾದೇವಿ ದಾರರು | |
|---|---|---|---|---|---|
| 1 | 1ನೇ ವಲಯ | 1318 | 0 | 775 | |
| 2 | 2ನೇ ವಲಯ | 0 | 0 | 579 | |
| 3 | 3ನೇ ವಲಯ | 719 | 5 | 248 | |
| 4 | 4ನೇ ವಲಯ | 263 | 0 | 164 | |
| 5 | ಬೆಂಗಳೂರು ಗ್ರಾ | 87 | 0 | 232 | |
| 6 | ರಾಮನಗರ | 248 | 45 | 180 | |
| 7 | ತುಮಕೂರು | 151 | 94 | 0 | |
| 8 | ಕೋಲಾರ | 360 | 0 | 364 | |
| 9 | ಚಿಕ್ಕಬಳ್ಳಾಪುರ | 115 | 155 | 206 | |
| 10 | ಚಿತ್ರದುರ್ಗ | 36 | 229 | 703 | |
| 11 | ದಾವಣಗೆರೆ | 13 | 218 | 655 | |
| 12 | ಶಿವಮೊಗ್ಗ | 114 | 342 | 348 | |
| 13 | ಮೈಸೂರು | 849 | 612 | 874 | |
| 14 | ಚಾಮರಾಜನಗರ | 59 | 104 | 208 | |
| 15 | ಮಂಡ್ಯ | 54 | 370 | 481 | |
| 16 | ಹಾಸನ | 313 | 306 | 1217 | |
| 17 | ಚಿಕ್ಕಮಗಳೂರು | 116 | 42 | 386 | |
| 18 | ಕೊಡಗು | 109 | 161 | 138 | |
| 19 | ದಕ್ಷಿಣ ಕನ್ನಡ | 245 | 66 | 651 | |
| 20 | ಉಡುಪಿ | 0 | 151 | 44 | |
| 21 | ಬೆಳಗಾವಿ | 117 | 1465 | 302 | |
| 22 | ವಿಜಯಪುರ | 45 | 230 | 121 | |
| 23 | ಬಾಗಲಕೋಟೆ | 53 | 297 | 81 | |
| 24 | ಧಾರವಾಡ | 631 | 270 | 97 | |
| 25 | ಗದಗ | 291 | 175 | 64 | |
| 26 | ಹಾವೇರಿ | 102 | 112 | 21 | |
| 27 | ಉತ್ತರಕನ್ನಡ | 114 | 54 | 20 | |
| 28 | ಬಳ್ಳಾರಿ | 255 | 70 | 209 | |
| 29 | ಬೀದರ | 27 | 151 | 6 | |
| 30 | ಕಲಬುರಗಿ | 27 | 841 | 65 | |
| 31 | ಕೊಪ್ಪಳ | 162 | 227 | 501 | |
| 32 | ರಾಯಚೂರು | 42 | 55 | 33 | |
| 33 | ಯಾದಗಿರಿ | 0 | 599 | 7 | |
| | **ಒಟ್ಟು** | **7035** | **7446** | **9980** | **24461** |

# ಅನುಬಂಧ "3"

**ದಿನಾಂಕ.31-03-2023ರ ಅಂತ್ಯಕ್ಕೆ ಇದ್ದಂತೆ ರಾಜ್ಯದಲ್ಲಿ ಪರವಾನಗಿ ರದ್ದುಪಡಿಸಲಾಗಿರುವ ಹಣಕಾಸು, ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳ ಜಿಲ್ಲಾವಾರು ವಿವರಗಳು.**

| ಕ್ರಸಂ | ಜಿಲ್ಲೆಯ ಹೆಸರು | ಮುಚ್ಚಿರುವ ಸಂಸ್ಥೆಗಳು | | | ಕಳೆದ 05 ವರ್ಷಗಳಲ್ಲಿ ರದ್ದುಗೊಳಿಸಿರುವ ಸಂಸ್ಥೆಗಳು | | |
|---|---|---|---|---|---|---|---|
| | | ಹಣಕಾಸು | ಲೇವಾದೇವಿ | ಗಿರವಿ | ಹಣಕಾಸು | ಲೇವಾದೇವಿ | ಗಿರವಿ |
| 1 | 1ನೇ ವಲಯ | 0 | 126 | 30 | 0 | 118 | 30 |
| 2 | 2ನೇ ವಲಯ | 0 | 0 | 0 | 0 | 3 | 2 |
| 3 | 3ನೇ ವಲಯ | 0 | 0 | 0 | 0 | 25 | 85 |
| 4 | 4ನೇ ವಲಯ | 0 | 2 | 1 | 0 | 2 | 1 |
| 5 | ಬೆಂಗಳೂರು ಗ್ರಾ | 0 | 0 | 0 | 0 | 0 | 0 |
| 6 | ರಾಮನಗರ | 0 | 0 | 0 | 0 | 1 | 1 |
| 7 | ತುಮಕೂರು | 0 | 0 | 0 | 0 | 0 | 0 |
| 8 | ಕೋಲಾರ | 0 | 0 | 0 | 0 | 0 | 0 |
| 9 | ಚಿಕ್ಕಬಳ್ಳಾಪುರ | 0 | 0 | 0 | 0 | 0 | 0 |
| 10 | ಚಿತ್ರದುರ್ಗ | 150 | 2 | 108 | 2 | 2 | 2 |
| 11 | ದಾವಣಗೆರೆ | 58 | 0 | 47 | 10 | 0 | 17 |
| 12 | ಶಿವಮೊಗ್ಗ | 190 | 84 | 101 | 14 | 12 | 7 |
| | ಒಟ್ಟು | 398 | 214 | 287 | 26 | 163 | 145 |
| 1 | ಮೈಸೂರು | – | – | – | 4 | 12 | 24 |
| 2 | ಚಾಮರಾಜನಗರ | 104 | 59 | 208 | 1 | 3 | 5 |
| 3 | ಮಂಡ್ಯ | 300 | 31 | 150 | 4 | 0 | 20 |
| 4 | ಹಾಸನ | 226 | 200 | 119 | 6 | 16 | 34 |
| 5 | ಚಿಕ್ಕಮಗಳೂರು | 378 | 348 | 103 | 3 | 2 | 1 |
| 6 | ಕೊಡಗು | 80 | 18 | 8 | 0 | 0 | 0 |
| 7 | ದಕ್ಷಿಣ ಕನ್ನಡ | 48 | 146 | 47 | 0 | 1 | 2 |
| 8 | ಉಡುಪಿ | 14 | 0 | 3 | 14 | 0 | 3 |
| | ಒಟ್ಟು | 1150 | 802 | 638 | 32 | 34 | 89 |
| 1 | ಬೆಳಗಾವಿ | 410 | 40 | 65 | 319 | 26 | 17 |
| 2 | ವಿಜಯಪುರ | 87 | 14 | 9 | 0 | 0 | 0 |
| 3 | ಬಾಗಲಕೋಟೆ | 97 | 25 | 23 | 67 | 2 | 3 |
| 4 | ಧಾರವಾಡ | 15 | 10 | 0 | 0 | 3 | 0 |
| 5 | ಗದಗ | 103 | 67 | 10 | 44 | 56 | 3 |
| 6 | ಹಾವೇರಿ | 10 | 8 | 2 | 0 | 0 | 0 |
| 7 | ಉತ್ತರಕನ್ನಡ | 0 | 0 | 0 | 0 | 1 | 1 |
| | ಒಟ್ಟು | 722 | 164 | 109 | 430 | 88 | 24 |
| 1 | ಬಳ್ಳಾರಿ | 15 | 38 | 38 | 0 | 4 | 1 |
| 2 | ಬೀದರ | 31 | 8 | 3 | 0 | 0 | 0 |
| 3 | ಕಲಬುರಗಿ | 65 | 32 | 14 | 43 | 21 | 7 |
| 4 | ಕೊಪ್ಪಳ | 134 | 130 | 34 | 0 | 11 | 0 |
| 5 | ರಾಯಚೂರು | 14 | 3 | 1 | 14 | 3 | 1 |
| 6 | ಯಾದಗಿರಿ | 334 | 6 | 3 | 0 | 0 | 0 |
| | ಒಟ್ಟು | 593 | 217 | 93 | 57 | 39 | 9 |
| | **ಒಟ್ಟು** | **2863** | **1397** | **1127** | **545** | **324** | **267** |

5387 1136

## ಅನುಬಂಧ "4"

**ದಿನಾಂಕ.31-03-2023ರ ಅಂತ್ಯಕ್ಕೆ ಇದ್ದಂತೆ ರಾಜ್ಯದಲ್ಲಿ ಹಣಕಾಸು, ಲೇವಾದೇವಿ ಹಾಗೂ ಗಿರವಿ ಸಂಸ್ಥೆಗಳ ಪಾವತಿಸಿರುವ ಭದ್ರತಾಠೇವಣಿ ವಿವರಗಳು**

| | | (ರೂ.ಲಕ್ಷಗಳಲ್ಲಿ) | | |
|---|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | ಪಾವತಿಸಿದ ಭದ್ರತಾ ಠೇವಣಿ | | |
| | | ಹಣಕಾಸು | ಲೇವಾದೇವಿ | ಗಿರವಿ |
| 1 | 1ನೇ ವಲಯ | 0 | 4.5 | 0 |
| 2 | 2ನೇ ವಲಯ | 0 | 1.30 | 1.00 |
| 3 | 3ನೇ ವಲಯ | 0.25 | 71.9 | 64.85 |
| 4 | 4ನೇ ವಲಯ | 0 | 0.75 | 0.1 |
| 5 | ಬೆಂಗಳೂರು ಗ್ರಾ | 6.2 | 12.2 | 17.35 |
| 6 | ರಾಮನಗರ | 4.50 | 22.0 | 42.82 |
| 7 | ತುಮಕೂರು | 0 | 0 | 0 |
| 8 | ಕೋಲಾರ | 0 | 0 | 0 |
| 9 | ಚಿಕ್ಕಬಳ್ಳಾಪುರ | 0 | 0 | 0 |
| 10 | ಚಿತ್ರದುರ್ಗ | 0.5 | 0.10 | 1.00 |
| 11 | ದಾವಣಗೆರೆ | 1.00 | 0 | 1.7 |
| 12 | ಶಿವಮೊಗ್ಗ | 0 | 0 | 0 |
| | ಒಟ್ಟು | 12.45 | 112.75 | 128.82 |
| 1 | ಮೈಸೂರು | 0.6 | 4.55 | 2.05 |
| 2 | ಚಾಮರಾಜನಗರ | 11.2 | 4.8 | 56.25 |
| 3 | ಮಂಡ್ಯ | 11.2 | 126.5 | 138.2 |
| 4 | ಹಾಸನ | 0.1 | 2.3 | 4.7 |
| 5 | ಚಿಕ್ಕಮಗಳೂರು | 32.54 | 36.785 | 22.64 |
| 6 | ಕೊಡಗು | 17.17 | 4.07 | 9.86 |
| 7 | ದಕ್ಷಿಣ ಕನ್ನಡ | 0 | 0.50 | 1.00 |
| 8 | ಉಡುಪಿ | 2.28 | 0 | 0.30 |
| | ಒಟ್ಟು | 75.09 | 179.505 | 235.00 |
| 1 | ಬೆಳಗಾವಿ | 119.95 | 23.92 | 0 |
| 2 | ವಿಜಯಪುರ | 57.50 | 9.10 | 0 |
| 3 | ಬಾಗಲಕೋಟೆ | 54.59 | 7.85 | 0 |
| 4 | ಧಾರವಾಡ | 40.50 | 63.10 | 0 |
| 5 | ಗದಗ | 29.20 | 22.90 | 0 |
| 6 | ಹಾವೇರಿ | 15.30 | 16.80 | 0 |
| 7 | ಉತ್ತರಕನ್ನಡ | 6.10 | 8.10 | 0 |
| | ಒಟ್ಟು | 323.14 | 151.77 | 0.00 |
| 1 | ಬಳ್ಳಾರಿ | 25.65 | 48.03 | 40.55 |
| 2 | ಬೀದರ | 19.25 | 2.65 | 0.65 |
| 3 | ಕಲಬುರಗಿ | 269.59 | 16.5 | 32.00 |
| 4 | ಕೊಪ್ಪಳ | 0 | 1.40 | 0 |
| 5 | ರಾಯಚೂರು | 11.63 | 11.25 | 14.00 |
| 6 | ಯಾದಗಿರಿ | 0 | 0 | 0 |
| | ಒಟ್ಟು | 326.12 | 79.83 | 87.2 |
| | **ಒಟ್ಟು** | **736.80** | **523.86** | **451.02** |
| | | | | 1711.68 |

# ಅನುಬಂಧ "5"

## ದಿನಾಂಕ. 31-03-2023 ರ ಅಂತ್ಯಕ್ಕೆ ಇದ್ದಂತೆ ಹಣಕಾಸು/ಗಿರವಿ/ಲೇವಾದೇವಿ ಸಂಸ್ಥೆಗಳಿಗೆ ಠೇವಣಿ ಮರುಪಾವತಿಸಿರುವ ಜಿಲ್ಲಾವಾರು ವಿವರಗಳು.

([illegible])

| ಕ್ರ.ಸಂ | ಜಿಲ್ಲೆಯ ಹೆಸರು | ಖಜಾನೆಯಲ್ಲಿ ಬಾಕಿ ಇರುವ ಬಿಲ್ಲುಗಳು | ಖಜಾನೆಯಿಂದ ಹಿಂತಿರುಗಿಸಲಾಗಿರುವ ಬಿಲ್ಲುಗಳು |
|---|---|---|---|
| 1 | 1ನೇ ವಲಯ | 0 | 0 |
| 2 | 2ನೇ ವಲಯ | 2.30 | 0 |
| 3 | 3ನೇ ವಲಯ | 5.80 | 0 |
| 4 | 4ನೇ ವಲಯ | 0 | 0 |
| 5 | ಬೆಂಗಳೂರು ಗ್ರಾ | 0 | 0 |
| 6 | ರಾಮನಗರ | 0 | 0 |
| 7 | ತುಮಕೂರು | 0 | 0 |
| 8 | ಕೋಲಾರ | 0 | 0 |
| 9 | ಚಿಕ್ಕಬಳ್ಳಾಪುರ | 0 | 0 |
| 10 | ಚಿತ್ರದುರ್ಗ | 0 | 0 |
| 11 | ದಾವಣಗೆರೆ | 0 | 0 |
| 12 | ಶಿವಮೊಗ್ಗ | 0 | 0 |
| | ಒಟ್ಟು | 8.1 | 0 |
| 1 | ಮೈಸೂರು | 0 | 0 |
| 2 | ಚಾಮರಾಜನಗರ | 0 | 0 |
| 3 | ಮಂಡ್ಯ | 0 | 0 |
| 4 | ಹಾಸನ | 0 | 0 |

| | | | |
|---|---|---|---|
| 5 | ಚಿಕ್ಕಮಗಳೂರು | 0 | 0 |
| 6 | ಕೊಡಗು | 0 | 0 |
| 7 | ದಕ್ಷಿಣ ಕನ್ನಡ | 0 | 3 |
| 8 | ಉಡುಪಿ | 0 | 8 |
| | ಒಟ್ಟು | 0 | 11 |
| 1 | ಬೆಳಗಾವಿ | 0 | 0 |
| 2 | ವಿಜಯಪುರ | 0 | 0 |
| 3 | ಬಾಗಲಕೋಟೆ | 0 | 0 |
| 4 | ಧಾರವಾಡ | 0 | 0 |
| 5 | ಗದಗ | 0 | 0 |
| 6 | ಹಾವೇರಿ | 0 | 0 |
| 7 | ಉತ್ತರಕನ್ನಡ | 0 | 0 |
| ಒಟ್ಟು | | 0 | 0 |
| 1 | ಬಳ್ಳಾರಿ | 0 | 0 |
| 2 | ಬೀದರ | 0 | 0 |
| 3 | ಕಲಬುರಗಿ | 0 | 0 |
| 4 | ಕೊಪ್ಪಳ | 0 | 0 |
| 5 | ರಾಯಚೂರು | 0 | 1 |
| 6 | ಯಾದಗಿರಿ | 0 | 0 |
| | ಒಟ್ಟು | 0 | 1 |
| **ಒಟ್ಟು** | | **8.10** | **12.00** |